## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

### ಸಿ.ಸಿ. ಸಂಃ 2123/2022

| | | |
|---|---|---|
| ಸಾಕ್ಷಿಯ ಹೆಸರುಃ | ಪದ್ಮ | ಫ್ರಾಸಾಃಃ 1 |
| ಗಂಡನ ಹೆಸರುಃ | ಕಾಳೇಗೌಡ | ಚಾಸಾಃಃ 1 |
| ವಯಸ್ಸುಃ | 65 ವರ್ಷ | ಪ್ರಮಾಣೀಕರಿಸಿದ<br>ದಿಃ03/03/2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಚಪ್ಪರದಹಳ್ಳಿ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ಚಾಸಾ-2 ಮತ್ತು 3 ರವರು ನನಗೆ ವಾರಗಿತ್ತಿಯರು. ಚಾಸಾ-4 ನನ್ನ ಮೈದುನ. ಚಾಸಾ-5 ರಿಂದ 7 ರವರು ನನ್ನ ಭಾವನ ಮಕ್ಕಳು. ಚಾಸಾ-8 ನನ್ನ ಮಗಳು. ಆರೋಪಿತ ನನ್ನ ಮೈದುನ. ಚಿಕ್ಕೇಗೌಡರು ನನ್ನ ಮಾವ. ಅವರಿಗೆ 6 ಜನ ಮಕ್ಕಳು.

2. ಚಪ್ಪರದಹಳ್ಳಿಯಲ್ಲಿ ಗ್ರಾಮದ ಸರ್ವೆ ನಂ. 86/13 ರಲ್ಲಿ 1 ಎಕರೆ ಜಮೀನು ಇದೆ. ಅದರಲ್ಲಿ ಸಿ.ತಮ್ಮಯ್ಯ ರವರಿಗೆ 14 ಗುಂಟೆ, ಆರೋಪಿತ-ಸಿ.ಕುಮಾರ ರವರಿಗೆ 7 ಗುಂಟೆ, ನನಗೆ 8 ಗುಂಟೆ, ಇಂದ್ರೇಶರವರಿಗೆ 8 ಗುಂಟೆ ಜಮೀನು ಇದೆ. ಸರ್ವೆ ನಂ.86/4 ರಲ್ಲಿ ಜಯಮ್ಮ ನವರಿಗೆ 2 ಎಕರೆ 18 ಗುಂಟೆ, ನನಗೆ 1 ಎಕರೆ 10 ಗುಂಟೆ, ಇಂದ್ರೇಶರವರಿಗೆ 1 ಎಕರೆ 10 ಗುಂಟೆ, ಸಿ.ತಮ್ಮಯ್ಯರವರಿಗೆ 1 ಎಕರೆ 7 ಗಂಟೆ, ಆರೋಪಿತ-ಸಿ.ಕುಮಾರ ರವರಿಗೆ 1 ಎಕರೆ 10 ಗುಂಟೆ ಜಮೀನು ಇದೆ. ಎಲ್ಲರೂ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದೇವೆ.

3. 2009 ರಲ್ಲಿ ಹಾರಂಗಿ ಏತ ನೀರಾವರಿ ಕಿರುಗಾವಲಿಗೆ ಭೂ ಸ್ವಾಧೀನವಾಗಿರುತ್ತದೆ. ಸರ್ವೆ ನಂ.86/13 ರಲ್ಲಿ ಇಂದ್ರೇಶರವರ 4 ಗುಂಟೆ, ನನ್ನ 4 ಗುಂಟೆ, ಆರೋಪಿತನ 3 ಗುಂಟೆ ಜಮೀನು ಸ್ವಾಧೀನವಾಗಿರುತ್ತದೆ. ಸರ್ವೆ ನಂ.86/4 ರಲ್ಲಿ ಜಯಮ್ಮ ನವರ $27^{1}/_{4}$ ಗುಂಟೆ ಜಮೀನು ಭೂ ಸ್ವಾಧೀನವಾಗಿರುತ್ತದೆ. ಸದರಿ ಭೂ ಸ್ವಾಧೀನದ ಪ್ರಯುಕ್ತ ಪರಿಹಾರದ ಆದೇಶವಾಗಿರುತ್ತದೆ. ಆರೋಪಿತ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ನಕಲು ಸಹಿಗಳನ್ನು ಮಾಡಿಕೊಂಡು ನಮಗೆ ಸೇರಬೇಕಾದ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ. ಆರೋಪಿತ ನಮಗೆ ಬಂದ ಪರಿಹಾರದ ಹಣವನ್ನು ತಾನೇ ಪಡೆದುಕೊಂಡು ನಮಗೆ ಮೋಸ ಮಾಡಿರುತ್ತಾರೆ. ನಾನು ಈ ಬಗ್ಗೆ ಪೊಲೀಸರಿಗೆ ದೂರನ್ನು ಸಲ್ಲಿಸಿದೆ. ಅವರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆನಂತರ ನಾನು ಖಾಸಗಿ ಪಿರ್ಯಾದಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿದೆ. ನಂತರ ಪೊಲೀಸರು ದೂರು ದಾಖಲಿಸಿ, ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿ, ನನ್ನ ಸಹಿ ಪಡೆದರು.

4. ಸಾಕ್ಷಿಯು ಖಾಸಗಿ ಪಿರ್ಯಾದಿ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. (ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**